ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು

ಸ್ಪೆಷಲ್ ಕೇಸ್ ನಂ.**34/2022**

ಫಿರ್ಯಾದುದಾರರು ರಾಜ್ಯದ ಪರವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ,
ಚಿಕ್ಕಮಗಳೂರು.

ವಿರುದ್ಧ

ಆರೋಪಿತರು ಅರುಣ್ ಕುಮಾರ್ ವಿ

ದೋಷಾರೋಪಣೆ

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್‌ಎಲ್.ಎಂ., ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಮತ್ತು ವಿಶೇಷ ನ್ಯಾಯಾಧೀಶರು, ಚಿಕ್ಕಮಗಳೂರು ಆದ ನಾನು, ಈ ಕೆಳಕಂಡ ಆರೋಪಿತರಾದ:-

ಅರುಣ್ ಕುಮಾರ್ ವಿ ,
ಬಿನ್ ಡಿ ವಡೀವೇಲು
43 ವರ್ಷ
ವಾಸ: ಕಾವ್ಯಶ್ರೀ ನಿಲಯ 2 ನೇ ತಿರುವು
ಮಾಧವ ನಗರ ಟಿ.ಕೆ. ರಸ್ತೆ
ಭದ್ರಾವತಿ ತಾ: ಶಿವಮೊಗ್ಗ ಜಿಲ್ಲೆ.

ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆ:

ದಿನಾಂಕ:30.01.2021 ರಂದು ತರೀಕೆರೆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಹೆಚ್ ತಿಮ್ಮಾಪುರ ಗ್ರಾಮದ ಸರ್ವೆ ಸಂಖ್ಯೆ 26 ರಲ್ಲಿ ಅನಧಿಕೃತ ಕಲ್ಲು ಗಣಿಗಾರಿಕೆ ಮತ್ತು ಸಾಗಾಣಿಕೆ ಪ್ರದೇಶಕ್ಕೆ ಮದ್ಯಾಹ್ನ 1.45 ಗಂಟೆಗೆ ಹಠಾತ್ ದಾಳಿ ನಡೆಸಿದಾಗ, ಆರೋಪಿತರಾದ ನೀವು, ಸರ್ಕಾರದ ಅನುಮತಿ ಅಥವಾ ಪರವಾನಿಗೆ ಇಲ್ಲದೆ, ಸದರಿ ಸ್ಥಳದಲ್ಲಿ ಸ್ಫೋಟಕಗಳನ್ನು ಬಳಸಿ ಅನಧಿಕೃತ ಕಟ್ಟಡ ಕಲ್ಲು ಗಣಿಗಾರಿಕೆ ಮಾಡಿರುವುದು ಕಂಡುಬಂದಿದ್ದು, ಆ ಮೂಲಕ ಗಣಿ ಮತ್ತು ಖನಿಜಗಳು ( ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಕಲಂ 4(1) ಸಹ ಕಲಂ 21 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ಮತ್ತು ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು 1600 ಮೆ.ಟನ್ ಕಟ್ಟಡ ಕಲ್ಲನ್ನು ತೆಗೆದು, ಸರ್ಕಾರದ ಅನುಮತಿ ಅಥವಾ ಪರವಾನಿಗೆ ಇಲ್ಲದೆ ಗಣಿಗಾರಿಕೆ ಮಾಡಿ ಸಾಗಾಣೆ ಮಾಡಿರುತ್ತೀರಿ , ಆ ಮೂಲಕ ಗಣಿ ಮತ್ತು ಖನಿಜಗಳು ( ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಕಲಂ 4(1 ಎ) ಸಹ ಕಲಂ 21 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು

ಈ ಸತ್ರ ಮತ್ತು ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಚಿಕ್ಕಮಗಳೂರು ಇವರು ಕಲ್ಲು ಗಣಿಗಾರಿಕೆ ಸ್ಥಳವನ್ನು ಪರಿಶೀಲಿಸಿದಾಗ, ಆರೋಪಿತರಾದ ನೀವು ಸರ್ಕಾರಕ್ಕೆ ಯಾವುದೇ ರಾಯಧನ (royalty) ಅಥವಾ ಡೆಡ್ ರೆಂಟ್ ಪಾವತಿ ಮಾಡದೇ ಮತ್ತು ಯಾವುದೇ ಖನಿಜ ರವಾನೆ ಪರವಾನಗಿ ಸುಮಾರು ರೂ.392500 ಮೊತ್ತದ 1600 ಮೆ.ಟನ್ ಕಟ್ಟಡ ಕಲ್ಲನ್ನು ಗಣಿಗಾರಿಕೆ ಮಾಡಿ ಸಾಗಾಣಿಕೆ ಮಾಡಿರುತ್ತೀರಿ, ಆ ಮೂಲಕ ಕರ್ನಾಟಕ ಸಣ್ಣ ಖನಿಜ ರಿಯಾಯಿತಿ ನಿಯಮಗಳು 1994 ರ ನಿಯಮ 3(1), 36(3), 42(1) ಸಹ ಕಲಂ 44 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ಮತ್ತು ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 12 ನೇ ದಿವಸ ಜನವರಿ ಮಾಹೆಯ 2026 ನೇ ಇಸವಿಯಂದು.

ಸಹಿ
(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಚಿಕ್ಕಮಗಳೂರು.

ಆರೋಪಿ -ಅರುಣ್ ಕುಮಾರ್ ವಿ

ಆರೋಪಿಯ ಆಪಾದನೆ

ಪ್ರಶ್ನೆ -1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ: ತಿಳಿಯಿತು

ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ತಪ್ಪು ಮಾಡಿಲ್ಲ ವಿಚಾರಣೆಯಾಬೇಕು

(ದಿನಾಂಕ 12 ನೇ ದಿವಸ ಜನವರಿ ಮಾಹೆಯ 2026 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
(ರಾಜೇಶ್ವರಿ ಎನ್. ಹೆಗಡೆ )
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು .

***mvp/-**